ನೋಟಿಸ್ ಕೊಟ್ಟಿದ್ದೇವೆ. ಪ್ರೊಸೀಜರ್ ಇರುತ್ತದೆ. ಎಕಾಏಕಿ ನಾವು ಕಾಲೇಜ್ ಮುಚ್ಚುವ ಕೆಲಸ ಮಾಡಲು ಆಗುವುದಿಲ್ಲ. ಈಗಾಗಲೇ ನಾವು 14-2-2003ರಲ್ಲಿ ಅವರಿಗೆ ನೋಟಿಸ್ ಕೊಟ್ಟಿದ್ದೇವೆ. ಉತ್ತರ ಕೇಳಿದ್ದೇವೆ, ಈ ರೀತಿ ತಿಳಿದುಬಂದಿದೆ, ತನಿಖೆಯಲ್ಲಿ ಸಾಬೀತಾಗಿದೆ, ಇದಕ್ಕೆ ನಿಮ್ಮ ಜವಾಬು ಏನು ಎಂದು ನೋಟಿಸ್ ಕೊಟ್ಟಿದ್ದೇವೆ. ಬಂದ ತಕ್ಷಣ ಅದಕ್ಕೆ ಸೂಕ್ತವಾದ ಕ್ರಮ ನಾವು ತೆಗೆದುಕೊಳ್ಳುತ್ತೇವೆ ಎಂಬುದನ್ನು ತಮಗೆ ತಿಳಿಸಲು ಇಚ್ಛಿಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ನೋಟಿಸ್ ಕೊಡಲಿಕ್ಕೇ ಇಷ್ಟು, ಸಮಯ ಬೇಕಾಗಿತ್ತಾ? ತನಿಖೆದಾರರು ಕಳೆದ ಅಧಿವೇಶನದ ಆದ 15 ದಿವಸದಲ್ಲೇ ಬಂದಿದ್ದರು. ತನಿಖೆಯೂ ಹೇಗಾಗಿದೆ ಎಂದರೆ ಬಡ ಮತ್ತು ದೀನ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುತ್ತಿರುವ ದೂರು ಬಂದಿಲ್ಲ ಎಂದು ತಾವು ಉತ್ತರದಲ್ಲಿ ಹೇಳಿದ್ದೀರಿ. ಸ್ವತಃ ತನಿಖೆಗೆ ಬಂದಿದ್ದ ನಿಮ್ಮ ಅಧಿಕಾರಿಗಳೇ ಡೇಟ್ ಕೊಟ್ಟು ಅನೌನ್ಸ್ ಮಾಡಿಬರಲಿಲ್ಲ. ಏನೋ ಅಬ್ ರಫ್ಟಾಗಿ ಹೋದರು. ಆದರೂ ಅಧಿಕಾರಿ ಬಂದಿದ್ದಾರೆ ಎಂದು ತಿಳಿದುಕೊಂಡ ಕೆಲವು ಪೋಷಕರು ಬಂದು ಕಣ್ಣೀರು ಹಾಕಿ ಹೋಗಿ ಹೇಳಿದ್ದಾರೆ. ನಮ್ಮ ಮಕ್ಕಳು ಎರಡನೇ ವರ್ಷದ ಪದವಿ ತರಗತಿಯಿಂದ ಬಿಟ್ಟಿದ್ದಾರೆ. ಒಂದನೇ ವರ್ಷ ಓದಿ ಅಷ್ಟಕ್ಕೇ ನಿಂತಿದ್ದಾರೆ. ಈರೀತಿ ನಮಗೆ ಇದರಿಂದ ತೊಂದರೆಯಾಗುತ್ತಿದೆ ಎಂದು. ಅಷ್ಟು ಹೇಳಿದರೂ ಕೂಡ ಅಧಿಕಾರಿಗಳು ತಪ್ಪು ಉತ್ತರವನ್ನು ತಮ್ಮಿಂದ ಕೊಡಿಸುತ್ತಿದ್ದಾರೆ. ವರದಿಯನ್ನೂ ಅವರು ಬಹುಶಃ ಮುಚ್ಚಿಟ್ಟಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಬರೀ ಪ್ರಾಸ್ಪೆಕ್ಟಸ್‌ಗೆ ಅವರು ಸಂಗ್ರಹಿಸಿದ ಹಣವೆಷ್ಟು? ಒಂದು ಪ್ರಾಸ್ಪೆಕ್ಟಸ್‌ಗೆ ನೂರು ರೂಪಾಯಿ ಪ್ರಾಸ್ಪೆಕ್ಟಸ್‌ನಲ್ಲಿ ಫೀಜಿನ ಸ್ಟ್ರಕ್ಚರ್ ಹಾಕಲಿಲ್ಲ. ನೋಟಿಸ್ ಬೋರ್ಡ್‌ನಲ್ಲಿ ನೋಡಿಕೊಂಡು ಹೋಗಿ ಎಂದು ಹೇಳಿದ್ದಾರೆ. ಇದನ್ನು ನೋಡಬೇಕಾದ ಅಧಿಕಾರಿಗಳು ಸರಿಯಾದ ರೀತಿ ಕೆಲಸ ಮಾಡದೇ ಇದ್ದರೆ ಇಡೀ ರಾಜ್ಯದಲ್ಲಿ ಈ ರೀತಿಯಾಗುತ್ತಿದೆ. ನೀವು ಹಣ ಕೊಟ್ಟರೂ ಬಡವರ ಮಕ್ಕಳಿಗೆ ಓದಲು ತೊಂದರೆಯಾಗುತ್ತಿದೆ. ಇದರ ಬಗ್ಗೆ ನೀವೇನು ಕ್ರಮ ಕೈಗೊಳ್ಳುತ್ತೀರಿ? ತತ್ಕ್ಷಣ ಅರರ ಅನುದಾನವನ್ನು ವಾಪಸ್ ಪಡೆಯುತ್ತೀರ?

ಡಾ: ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೇ ಸರ್ಕಾರದವರು ಶುಲ್ಕವನ್ನು ತೀರ್ಮಾನ ಮಾಡಿದ್ದೇವೆ. 400 ರೂಪಾಯಿ ಟ್ಯೂಷನ್ ಫೀ, ಪ್ರಯೋಗಶಾಲೆಗೆ 110 ರೂಪಾಯಿ ಪಡೆಯಬೇಕೆಂಬ ಆದೇಶವನ್ನು 2000ನೇ ಇಸವಿಯಲ್ಲಿ ಹೊರಡಿಸಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಅವರು ಡೆವಲಪ್‌ಮೆಂಟ್ ಫೀ ತೆಗೆದುಕೊಳ್ಳಲು ಅವರಿಗೆ ಅವಕಾಶ ಇಲ್ಲ. ತಾವೇನು ರಿಸೀಟ್ಸ್ ಕೊಟ್ಟಿದ್ದೀರಿ ಅವನ್ನು ನಾವು ವೆರಿಫೈ ಮಾಡಿದಾಗ ತಾವು ಹೇಳಿದ್ದು ಸಾಬೀತಾಗಿದೆ ಎಂಬುದು ವರದಿಯಲ್ಲಿ ಬಂದಿದೆ. Extensive reports ನನಗೆ ಕೊಟ್ಟಿರುವಂಥಾದ್ದು, ಅದರಲ್ಲಿ ಯಾವುದೂ ಮುಚ್ಚುಮರೆ ಇಲ್ಲ. ಆದರೆ ಪ್ರೊಸಿಜರ್ ನಾವು ಏನು ಮಾಡಬೇಕು? ತಕ್ಷಣ ನಾವು ಕಾಲೇಜು ಮುಚ್ಚಲು ಆಗುವುದಿಲ್ಲ. ವಿದ್ಯಾರ್ಥಿಗಳ ದೃಷ್ಟಿಯಿಂದ ನಾವು ಆ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಅವರಿಗೆ ನೋಟಿಸ್ ಕೊಟ್ಟಿದ್ದೇವೆ ಅದಕ್ಕೆ ಉತ್ತರ ಬಂದ ಮೇಲೆ ತಕ್ಷಣ ಕ್ರಮ ಕೈಗೊಳ್ಳುತ್ತೇವೆ.

ಕಿತ್ತೂರಿನ ರಾಣಿ ಚೆನ್ನಮ್ಮನ ಅರಮನೆ ಅವಸಾನದತ್ತ ಸಾಗಿರುವುದು

49(433) - **ಶ್ರೀ ಪೂಜಾರ್ ಪಿ.ಹೆಚ್.** (ಬಾಗಲಕೋಟೆ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ). ಗತವೈಭವ ಸಾರುವ ರಾಷ್ಟ್ರಮಟ್ಟದ ಪ್ರವಾಸಿ ಕೇಂದ್ರವಾಗಬೇಕಾಗಿದ್ದ ಕಿತ್ತೂರು ವೀರರಾಣಿ ಚೆನ್ನಮ್ಮನ ಅರಮನೆ ಮತ್ತು ಸ್ಮಾರಕಗಳ ಅವಸಾನದತ್ತ ಸಾಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರ ಪುನರ್ ನಿರ್ಮಾಣಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಇ) ಸ್ವಾತಂತ್ರ ಸಂಗ್ರಾಮದ ಕುರುಹುಗಳಾದ ಕಿತ್ತೂರಿನ ಇತಿಹಾಸದೊಂದಿಗೆ ಸಂಬಂಧವಿರುವ ಅವಶೇಷಗಳಾವುವು; (ವಿವರ ನೀಡುವುದು)

ಈ) ಇತಿಹಾಸದ ಪುರಾವೆಗಳಂತಿರುವ ಈ ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಉ) ಕಿತ್ತೂರಿನ ಸಮಗ್ರ ಅಭಿವೃದ್ಧಿಗೆ ಹಣ ನಿಗದಿಪಡಿಸಲಾಗಿದೆಯೇ;

ಊ) ಹಾಗಿದ್ದಲ್ಲಿ, ಉದ್ದೇಶಿತ ಯೋಜನೆಗಳಾವುವು? (ವಿವರ ನೀಡುವುದು)

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಕಿತ್ತೂರಿನ ಅವಶೇಷಗಳನ್ನು ಕಾಲಾಕಾಲಕ್ಕೆ ಸಂರಕ್ಷಿಸಲಾಗಿದ್ದು, ಅವಸಾನದ ಅಂಚಿನಲ್ಲಿ ಇದೆ ಎಂದು ಪರಿಭಾವಿಸಲು ಬರುವುದಿಲ್ಲ. ಉಳಿದ ಸ್ಮಾರಕಗಳು ಕಾಲಿನ ಹೊಡೆತಕ್ಕೆ ಸಿಕ್ಕಿ ಸ್ವಲ್ಪ ಮಟ್ಟಿಗೆ ಶಿಥಿಲವಾಗಿವೆ. 1992-93ನೇ ಸಾಲಿನಲ್ಲಿ ರೂ. 9.90 ಲಕ್ಷ ವೆಚ್ಚದಲ್ಲಿ ಅರಮನೆ ಮತ್ತು ಕೋಟೆ ಸ್ಮಾರಕಗಳನ್ನು ರಕ್ಷಿಸಲಾಗಿದೆ.

ಆ) 11ನೇ ಆರ್ಥಿಕ ಯೋಜನೆಯಡಿ 2002-03ನೇ ಸಾಲಿನಲ್ಲಿ ಕಿತ್ತೂರಿನ ಕೋಟೆ, ಅರಮನೆ ಇವುಗಳ ಸಂರಕ್ಷಣೆ ಮತ್ತು ವಸ್ತು ಸಂಗ್ರಹಾಲಯದ ಅಭಿವೃದ್ಧಿ ಕೈಗೊಳ್ಳುವ ಯೋಜನೆಯಿದೆ. ಈ ಯೋಜನೆಯಡಿ ಒಟ್ಟು ರೂ. 20.60 ಲಕ್ಷವನ್ನು ಮೀಸಲಿಡಲಾಗಿದೆ. "ಇಂಟಾಕ್" ಕರ್ನಾಟಕ ಘಟಕದವರು ಕಿತ್ತೂರು ಅರಮನೆಯ ಪರಿಸರದ ಸೌಂದರ್ಯೀಕರಣವನ್ನು ಕೈಗೊಳ್ಳಲಿದ್ದಾರೆ.

ಇ) ಕಿತ್ತೂರು ಇತಿಹಾಸಕ್ಕೆ ಸಂಬಂಧಿಸಿದ ಅವಶೇಷಗಳು

1) ಅರಮನೆ, ಅದರ ವಿವಿಧಭಾಗಗಳಾದ ಸದರ ಕಟ್ಟೆ, ದರ್ಬಾರ್‌ಹಾಲ್, ಅಡಿಗೆಮನೆ, ಊಟದಮನೆ, ಸ್ನಾನದ ಕೋಣೆಗಳು, ಆನೆ, ಒಂಟೆ, ಕುದುರೆ ಲಾಯಗಳು ಇತ್ಯಾದಿ.

2) ಕೋಟೆ

3) ಧಾರವಾಡದಲ್ಲಿರುವ ಥ್ಯಾಕರೆ ಸಮಾಧಿ.

ಈ) ಈ ಸ್ಮಾರಕ ಸಂರಕ್ಷಣೆಗಾಗಿ ಮೇಲೆ ತಿಳಿಸಿದಂತೆ ಕ್ರಮ ಕೈಗೊಳ್ಳಲಾಗಿದೆ.

ಉ) ರೂ. 22.60 ಲಕ್ಷಗಳನ್ನು 11ನೇ ಆರ್ಥಿಕ ಆಯೋಗದ ಯೋಜನೆಯಡಿಯಲ್ಲಿ ಮೀಸಲಿಡಲಾಗಿದೆ.

ಊ) ಮೇಲಿನಂತೆ.

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ, 1992-93ನೇ ಸಾಲಿನಲ್ಲಿ 9.90 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿದ್ದು, ಕಿತ್ತೂರು ವೀರರಾಣಿ ಚೆನ್ನಮ್ಮನ ಅರಮನೆ ಮತ್ತು ಸ್ಮಾರಕಗಳನ್ನು ರಕ್ಷಣೆ ಮಾಡಿರುವಂಥಾದ್ದು, ನಂತರ 2002-03ನೇ ಸಾಲಿನಲ್ಲಿ ಇಂಟಾಕ್ ಕರ್ನಾಟಕ ಘಟಕದವರ ವತಿಯಿಂದ 20.60 ಲಕ್ಷ ಖರ್ಚು ಮಾಡಲು ಯೋಜನೆ ತಯಾರಿಸಲಾಗಿದೆ ಎಂದಿದ್ದಾರೆ. ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಸಚಿವರ ಗಮನಕ್ಕೆ ತರಬಯಸುತ್ತೇನೆ: ಕಿತ್ತೂರು ಸ್ವಾತಂತ್ರ ್ಯ ಸಂಗ್ರಾಮದ ಮೊದಲ ಕಹಳೆ ಊದಿದಂತಹ

ಇತಿಹಾಸ ಪ್ರಸಿದ್ಧವಾದ ಊರು. ರಾಣಿ ಚೆನ್ನಮ್ಮನ ಬಗ್ಗೆ ಅನೇಕ ರೀತಿಯ ಮಾತು ನಾವು ಆಡುತ್ತಿದ್ದೇವೆ.

ಆಕೆ ನಮಗೆ ಸ್ಫೂರ್ತಿಯ ನೆಲೆ. ಆದರೆ ದೌರ್ಭಾಗ್ಯದಿಂದ ಈ ಎಲ್ಲಾ ಸರ್ಕಾರಗಳೂ ಆ ಸಂಸ್ಥಾನದ ಒಂದು ವ್ಯವಸ್ಥೆಯ ಬಗ್ಗೆ, ಅಲ್ಲಿಯ ಸ್ಮಾರಕಗಳ ಬಗ್ಗೆ ಅರಮನೆ, ಇನ್ನಿತರ ಕಟ್ಟಡಗಳ ಬಗ್ಗೆ ಅತ್ಯಂತ ನಿಕೃಷ್ಟವಾಗಿ ಕಾಣುತ್ತಾ ಬಂದಿವೆ. ಅಲ್ಲಿಗೆ ಹೋಗಿ ನೋಡಿದಂಥ ಯಾವುದೇ ಪ್ರವಾಸಿಗರು ಅತ್ಯಂತ ಕನಿಷ್ಟ ಒಂದು ಭಾವನೆಯನ್ನು ತಾಳುವಂಥ ಒಂದು ಸ್ಥಿತಿಯಲ್ಲಿ ಆ ಸ್ಮಾರಕಗಳು ಕಾಣುತ್ತಿವೆ. ಅಲ್ಲಿ, ಹಂದಿ, ನಾಯಿ, ದನಗಳ ಬೀಡಾಗಿ ಇವತ್ತು ಆ ಸ್ಮಾರಕಗಳು ಕಾಣುತ್ತಿವೆ. ಇದು ಅತ್ಯಂತ ಶೋಚನೀಯವಾಗಿದೆ. ಹಿಂದೆ ಬಂಗಾರಪ್ಪನವರ ಸರ್ಕಾರವಿದ್ದಂಥ ಸಂದರ್ಭದಲ್ಲಿ ಸುಮಾರು ಏಳು ಕೋಟಿ ರೂಪಾಯಿಗಳ ಯೋಜನೆಯನ್ನು ಅವರು ಮಾಡಿದ್ದರು. ಆಗ ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಅವರು ಖರ್ಚುಮಾಡುವುದಕ್ಕೆ ಆಯಿತು. ಅಲ್ಲಿಗೆ ಅವರ ಅವಧಿ ಮುಗಿಯಿತು. ಇತ್ತೀಚೆಗೆ ತಾವು ಈ ವರ್ಷ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂಥ ಈ ಹಣಕಾಸಿನ ವರ್ಷ ಮುಗಿಯುವುದರೊಳಗಾಗಿ ಎಂದು ತಾವು ತಿಳಿಸಿದ್ದೀರಿ. ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇಷ್ಟು ಹಣ ಸಾಕಾಗುತ್ತದೆಯೇ ಎಂಬ ಉತ್ತರವನ್ನು ನಾನು ತಮ್ಮಿಂದ ಅಪೇಕ್ಷೆ ಮಾಡುತ್ತೇನೆ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಕಿತ್ತೂರು ರಾಣಿ ಚೆನ್ನಮ್ಮನ ಕೋಟೆಯಾಗಲಿ, ಅಲ್ಲಿರುವ ಅವಶೇಷಗಳಾಗಲಿ, ಒಂದು ಐತಿಹಾಸಿಕ ಪರಂಪರೆಯ ಒಂದು ವಸ್ತು ಸ್ಥಿತಿಯನ್ನು ತೋರಿಸತಕ್ಕ ಜಾಗವಾಗಿದೆ. ನಮ್ಮ ಸದಸ್ಯರು ಹೇಳಿದರು, ಅದು ಸಂರಕ್ಷಣೆ ಮತ್ತು ಅಭಿವೃದ್ಧಿ ಕೈಗೊಂಡಿರತಕ್ಕ ನಿಟ್ಟಿನಲ್ಲಿ ವಿಳಂಬವಾಗಿದೆ, ಸರಿಯಾಗಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರಲ್ಲಿ ಯಾವುದೇ ಐತಿಹಾಸಿಕಕ್ಕೆ ಸಂಬಂಧಿಸಿದ ಅವಶೇಷಗಳನ್ನು ನಾವು ಸಂರಕ್ಷಣೆ ಮಾಡತಕ್ಕ ನಿಟ್ಟಿನಲ್ಲಿ ವಸ್ತು ಸಂಗ್ರಹಾಲಯದ ಅಭಿವೃದ್ಧಿಗೆ ಹನ್ನೊಂದು ಆರ್ಥಿಕ ಆಯೋಗದ ಅನುದಾನದಲ್ಲಿ 28 ಲಕ್ಷ ರೂಪಾಯಿಗಳ ಹಣವನ್ನು ನಾವು ಇಟ್ಟಿದ್ದೇವೆ. ಇದರಲ್ಲಿ ಈಗಾಗಲೇ ನಾವು 14.30 ಲಕ್ಷ ರೂಪಾಯಿಗಳನ್ನು ವಸ್ತು ಸಂಗ್ರಹಾಲಯದ ಅಭಿವೃದ್ಧಿಗೆ 2000-01 ರಲ್ಲಿ ಖರ್ಚು ಮಾಡಲಾಗಿದೆ. ಹಾಗೂ 'ಇಂಟ್ಯಾಕ್' ಅಂದರೆ ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯ ರಾಷ್ಟ್ರೀಯ ಟ್ರಸ್ಟ್‌ನ ವತಿಯಿಂದ ಒಂದು ಸಂಯುಕ್ತ ಯೋಜನೆಯೊಂದಿಗೆ ಅದನ್ನು 21 ಸ್ಮಾರಕಗಳನ್ನು ನಾವು ಈಗಾಗಲೇ ಗುರುತಿಸಿ ಅದರೊಳಗೆ ಇದನ್ನೂ ಸೇರಿಸಿ ಆ ಕೋಟೆ, ಅರಮನೆ, ವಸ್ತು ಸಂಗ್ರಹಾಲಯವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ 9.58 ಲಕ್ಷ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡು ಈ ಕಾರ್ಯೋನ್ಮುಖ ವಿಚಾರದ ಬಗ್ಗೆ ಕಾರ್ಯವಾಗುತ್ತಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು 2002-03 ರಲ್ಲಿ ಕೋಟೆ ರ. ಮತ್ತು ಅರಮನೆ ಸಂರಕ್ಷಣೆಗೆ ಆರು ಲಕ್ಷ ರೂಪಾಯಿ, ಮತ್ತು 2003-04ರ ಒಂದು ಯೋಜನೆಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಅದಕ್ಕೆ ಮೀಸಲಾಗಿಡುತ್ತೇವೆ. ವಸ್ತು ಸಂಗ್ರಹಾಲಯದ ಅಭಿವೃದ್ಧಿಗೆ ಈಗಾಗಲೇ 5 ಲಕ್ಷ ರೂಪಾಯಿಗಳು ಖರ್ಚಾಗಿದ್ದು ಮುಂದೆ ಅದಕ್ಕೆ ಇನ್ನೂ 70 ಸಾವಿರ ರೂಪಾಯಿಗಳನ್ನು ಒಟ್ಟು 5.70 ಲಕ್ಷ ರೂಪಾಯಿಗಳು ಹಾಗೂ ಪರಿಸರ ಅಭಿವೃದ್ಧಿ ಸೌಂದರೀಕರಣಕ್ಕೆ ಇಂಟ್ಯಾಕ್ ವತಿಯಿಂದ 9.60 ಲಕ್ಷ ರೂಪಾಯಿಗಳನ್ನು

ನಾವು ಯೋಜನಾ ವಿಚಾರವಾಗಿ ಇಟ್ಟುಕೊಂಡಿದ್ದೇವೆ. ಒಟ್ಟು 37.60 ಲಕ್ಷ ರೂಪಾಯಿಗಳನ್ನು ಇದಕ್ಕೆ ನಾವು ಮೀಸಲಾಗಿಟ್ಟಿದ್ದೇವೆ. ಆ ಅಡಿಯಲ್ಲಿ ಕಾರ್ಯ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ಮಾತನ್ನು ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಏನು ಕೆಲವೊಂದು ಯೋಜನೆಗಳನ್ನು ಹಾಕಿಕೊಂಡಿರುವುದರ ಬಗ್ಗೆ ಹೇಳಿದರು. ಸಾಹಿತ್ಯ ಪರಿಷತ್ತಿನ ಸಮ್ಮೇಳನ ಈ ವಾರದಲ್ಲಿ ಬೆಳಗಾಂನಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ ರಾಣಿ ಚನ್ನಮ್ಮನ ಕಿತ್ತೂರು ಉತ್ಸವ ನಡೆಯುತ್ತದೆ. ಆಮೇಲೆ ಕಿತ್ತೂರೋತ್ಸವ ವರ್ಷ ವರ್ಷ ಅಲ್ಲಿ ಸರಿಯಾಗಿ ನಡೆಯುತ್ತಿಲ್ಲ. ಇನ್ನೊಂದು ನಾನು ಪ್ರಮುಖವಾಗಿ ಹೇಳುವಂಥದ್ದು ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಗಳಾದಂಥ ಸಂದರ್ಭದಲ್ಲಿ ಕಿತ್ತೂರಿನ ಕೋಟೆಗಳ ರಕ್ಷಣೆ ಇರಬಹುದು, ಅಲ್ಲಿದ್ದ ಹಿಂದಿನ ವಸ್ತುಗಳ ಸಂರಕ್ಷಣೆ ಸಲುವಾಗಿ ಇರಬಹುದು, ಅದರ ಬಗ್ಗೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಏಳು ಕೋಟಿ ರೂಪಾಯಿ ಹಣದ ಬಗ್ಗೆ ಒಂದು ಗ್ರಾಂಟ್ಸ್ ಬಗ್ಗೆ ಅವರು ಘೋಷಣೆಯನ್ನು ಮಾಡಿದ್ದರು. ಅದು ಮಂಜೂರಾಗಿತ್ತು. ಆದರೆ, ಅದರಲ್ಲಿ ಎಷ್ಟು ಖರ್ಚಾಯಿತು, ಏನಾಯಿತು? ಏನೇನು ಮಾಡಿದ್ದೀರಿ ಎಂದು ಇವತ್ತಿಗೂ ಅದು ಹೊರಗೆ ಬರಲಿಲ್ಲ. ಅದಕ್ಕೆ ನಿಮಗೇನಾದರೂ ಮಾಹಿತಿ ಇದ್ದರೆ ದಯವಿಟ್ಟು ಅದನ್ನು ಇಲ್ಲಿ ಸದನದಲ್ಲಿ ಇಡಬೇಕು. ಆ ಏಳು ಕೋಟಿ ರೂಪಾಯಿ ಹಣ ಮಂಜೂರಾಗಿದ್ದರೆ ಅದನ್ನು ಏಕೆ ಖರ್ಚು ಮಾಡಿಲ್ಲ ಎನ್ನುವುದೂ ಕೂಡ ಹೊರಗೆ ಬರಬೇಕಾಗುತ್ತದೆ. ಅದರ ಜೊತೆಗೆ ಅಲ್ಲಿ ಬೆಳಗಾಂ ಪಕ್ಕದಲ್ಲಿ ಕಾಕತಿ ಇದೆ. ಅದು ಚನ್ನಮ್ಮಾಜಿಯವರು ಹುಟ್ಟಿದಂಥ ಊರು. ತವರುಮನೆ ಅಲ್ಲಿ ಚನ್ನಮ್ಮಾಜಿಯ ಪುತ್ಥಳಿ ಪ್ರತಿಷ್ಠಾಪನೆ ಸಲುವಾಗಿ ಈಗಾಗಲೇ ಬಹಳಷ್ಟು ಪ್ರಯತ್ನಗಳಾಗಿದ್ದಾವೆ. ಮಾನ್ಯ ಕೌಜಲಗಿಯವರಿಗೂ ಅದು ಗೊತ್ತು. ಆದರೆ ಅಲ್ಲಿ ಇನ್ನೂ ಪುತ್ಥಳಿ ಪ್ರತಿಷ್ಠಾಪೆ ಆಗಿಲ್ಲ. ಕಾಕತಿಯಲ್ಲಿಯೂ ಕೋಟೆ ಇದೆ. ಆ ಕೋಟೆಯನ್ನು ಸಂರಕ್ಷಣೆ ಮಾಡುವಂಥದ್ದೂ ಅದು ಆಗುತ್ತಿಲ್ಲ. ಅದೊಂದು ಪ್ರವಾಸೋದ್ಯಮ ಕ್ಷೇತ್ರವಾಗಿ ಬೆಳೆಯಬೇಕು. ಅದರ ಬಗ್ಗೆ ಚಿಂತನೆಯಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಹೋಗುತ್ತಿದ್ದಾರೆ. ಅಲ್ಲಿ ಒಂದು ಈ ಕಿತ್ತೂರಿನ ಸಮಗ್ರ ಅಭಿವೃದ್ಧಿ ಬಗ್ಗೆ ಒಂದು ಪ್ಯಾಕೇಜ್ ಅನೌನ್ಸ್ ಮಾಡಿ ಬರಲಿ. ತಾವೆಲ್ಲಾ ಅದಕ್ಕೆ ಸಲಹೆಗಳನ್ನು ಕೊಡಬೇಕು. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ನಾನು ತಮ್ಮಮುಖಾಂತರ ವಿನಂತಿ ಮಾಡುತ್ತಿದ್ದೇನೆ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಅಧ್ಯಕ್ಷರೇ, ಮಾನ್ಯರು ಉತ್ಸವದ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ನಾವು ಪ್ರತಿ ಜಿಲ್ಲಾ ಉತ್ಸವಕ್ಕೆ ಇಲಾಖೆಯಿಂದ ಐವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಅಲ್ಲಿಯ ಸ್ಥಳೀಯ ಉಸ್ತುವಾರಿ ಸಚಿವರುಗಳು ಮತ್ತು ಜಿಲ್ಲಾಧಿಕಾರಿಗಳ ಒಂದು ಸಹಯೋಗದೊಂದಿಗೆ ಇಂಥ ಉತ್ಸವಗಳು ನಡೆಯಬೇಕು. ಅದರ ಬಗ್ಗೆ ನಮ್ಮ ಇಲಾಖೆ ಈ ಉತ್ಸವಕ್ಕೆ ನಾವು ಹಣ ಬಿಡುಗಡೆ ಮಾಡುವುದರಲ್ಲಿ ಯಾವತ್ತೂ ವಿಳಂಬ ಮಾಡಿಲ್ಲ. ಅಲ್ಲಿಯ ಸ್ಥಳೀಯರು ಅದನ್ನು ಮಾಡತಕ್ಕಂಥ ನಿಟ್ಟಿನಲ್ಲಿ ಯಾವತ್ತೇ ಅವರು ಉತ್ಸವವನ್ನು ಮಾಡುವುದಕ್ಕೆ ತಯಾರಾಗಿದ್ದರೆ ನಾವು ಹಣವನ್ನು ಕೊಡುತ್ತೇವೆ. ಅದರ ಜೊತೆಗೆ ತಾವು ಹೇಳಿದಂತೆ ಬಂಗಾರಪ್ಪನವರ ಕಾಲದಲ್ಲಿ ಏಳು ಕೋಟಿ ರೂಪಾಯಿ ಬಿಡುಗಡೆಯಾಗಿತ್ತು ಎಂದು ಹೇಳಿದ್ದೀರಿ. ಅದರ ವಿವರವನ್ನು ಕೊಡಲಿಕ್ಕೆ ನನಗೆ ಸ್ವಲ್ಪ ಕಾಲಾವಕಾಶ ಬೇಕು ಮಾನ್ಯ ಸಭಾಧ್ಯಕ್ಷರೇ. ತಾವು ಕಾಲಾವಕಾಶ ಕೊಟ್ಟಲ್ಲಿ ಅದರ ಬಗ್ಗೆ ನಾನು ಪರಿಶೀಲಿಸಿ ಅದಕ್ಕೆ ಉತ್ತರ

ಕೊಡುತ್ತೇನೆ. ಹಾಗೆ ಕಾಕತಿಯಲ್ಲಿ ಪುತ್ಥಳಿ ಸ್ಥಾಪನೆ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಮತ್ತು ಈ ಒಂದು ಸಾಹಿತ್ಯ ಸಮ್ಮೇಳನದ ಉತ್ಸವ ನಡೆಯತಕ್ಕಂಥ ಒಂದು ನಿಟ್ಟಿನಲ್ಲಿ ಹಾಗೂ ಪ್ರವಾಸೋದ್ಯಮದ ಸಚಿವರ ಜೊತೆಗೆ ಮಾತನಾಡಿ ಇದರ ಬಗ್ಗೆ ಏನು ಮಾಡಬೇಕೆನ್ನುವುದನ್ನು ಜಂಟಿಯಾಗಿ ನಾವು ಮಾಡತಕ್ಕ ಒಂದುಕಾರ್ಯ ಯೋಜನೆಯಲ್ಲಿ ಭಾಗಿಯಾಗುತ್ತೇನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಅಮ್ಮಾವರೇ, ನೀವು ಏಳನೇ ತಾರೀಖಿಗೆ ಸಮ್ಮೇಳಕ್ಕೆ ಹೋಗುತ್ತೀರಿ. ಅಷ್ಟರೊಳಗೆ ಡಿಕೇರೇಷನ್ ಮಾಡಿ. ಹೇಗೂ ಬೆಳಗಾಂಗೆ ಹೋಗುತ್ತಿದ್ದೀರಲ್ಲಾ ಇವತ್ತು ಡಿಕ್ಲೇರ್ ಮಾಡಿ. ಬೆಳಗಾಂಗೆ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗುತ್ತಿದ್ದೀರಿ. ಇದೊಂದು ಅತ್ಯಂತ ಪ್ರಮುಖವಾದ ಬೇಡಿಕೆ. ಮೊದಲಿನಿಂದಲೂ ಮುಂದುವರಿಯುತ್ತಾ ಬಂದಿದೆ. ಅದಕ್ಕೆ ಪುತ್ಥಳಿ ಮಾಡುತ್ತೇನೆಂದು ಅನೌನ್ಸ್ ಮಾಡಿಬಿಟ್ಟರೆ ತಮಗೆ ದೊಡ್ಡ ಹೆಸರು ಬರುತ್ತದೆ.

ಅಧ್ಯಕ್ಷರು : ಮಾನ್ಯ ನೀಲಕಂಠಪ್ಪನವರೇ, ನಾನು ಕರೆದಿದ್ದು ಬೆಲ್ಲದ್ ಅವರನ್ನು. ತಾವು ಮಾತನಾಡಿದರೆ ಹೇಗೆ?

ಶ್ರೀ ಬಿ.ಆರ್. ನೀಲಕಂಠಪ್ಪ : ಅವರು ಹೇಳುವ ಪ್ರಶ್ನೆಯನ್ನೇ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಸದಸ್ಯರು ತಾವು ಅರ್ಥ ಮಾಡಿಕೊಳ್ಳಬೇಕು. ತಾವು ಬೆಲ್ಲದ್ ಅವರಾ? ತಮ್ಮ ಹೆಸರನ್ನೇನಾದರೂ ಛೇಂಜ್ ಮಾಡಿಕೊಂಡಿದ್ದೀರಾ?

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೇ, ಕನ್ನಡ ಮತ್ತು ಸಂಸ್ಕೃತಿ ಸಚಿವೆಯರು ನಮ್ಮ ಪ್ರಶ್ನೆಗೆ ಕೆಲವು ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ ಇಡೀ ಭಾರತದ ಸ್ವಾತಂತ್ರ್ಯದ ಇತಿಹಾಸದಲ್ಲಿ ಮೊಟ್ಟಮೊದಲನೇ ಮಹಿಳೆ ಚನ್ನಮ್ಮಾಜಿಯವರು. ಸ್ವಾತಂತ್ರ್ಯದ ಸಲುವಾಗಿ ಕೆಲಸ ಮಾಡಿದಂಥ ಒಂದು ಚಿಕ್ಕ ಮಾಂಡಳಿಕಳಾಗಿ ಕಿತ್ತೂರು ಚನ್ನಮ್ಮ ಮಾಡಿದಂಥ ಇತಿಹಾಸ ಭಾರತದ ಇತಿಹಾಸದಲ್ಲಿ ಇದೆ. ಇಂಥ ಒಂದು ಮಹಿಳೆಯ ದಿನಾಚರಣೆಯನ್ನು ಮಹಿಳಾ ದಿನಾಚರಣೆಯನ್ನು ಆ ಸ್ಥಳದಲ್ಲಿ ಪ್ರತಿ ವರ್ಷ ಮಾಡಬೇಕು ಎನ್ನುವುದು ಅದರ ಬಗ್ಗೆ ಹಿಂದೆ ವಿಚಾರ ಮಾಡಿದ್ದರು. ಏಕೆಂದರೆ ಪ್ರತಿ ವರ್ಷ ಈ ಕಿತ್ತೂರು ಚೆನ್ನಮ್ಮನ ಹೆಸರಿನ ಮೇಲೆ ಮಹಿಳಾ ದಿನಾಚರಣೆ ಆ ರಾಜ್ಯಮಟ್ಟದಲ್ಲಿ ಅಲ್ಲಿಯೇ ನಡೆಯಬೇಕೆಂದು ಇದೆ. ಅದನ್ನು ಯಾವಾಗಿನಿಂದ ಪ್ರಾರಂಭ ಮಾಡುತ್ತೀರಿ, ಅದು ಬಹಳ ಮುಖ್ಯ. ಇಡೀ ದೇಶದ ಇತಿಹಾಸದಲ್ಲೇ ಮೊಟ್ಟಮೊದಲನೇ ಮಹಿಳೆ. ಮಹಿಳಾ ದಿನಾಚರಣೆ ಅಲ್ಲಿಯೇ ಆಗಬೇಕು. ಅಂದರೆ ಕಿತ್ತೂರು ಚನ್ನಮ್ಮನ ವಿಚಾರದಲ್ಲಿ ಮಹಿಳೆಯರು ಹೆಚ್ಚು ಪಾಲ್ಗೊಳ್ಳಬೇಕು. ಅದು ಮುಖ್ಯವಾದುದು. ಎರಡನೆಯದು, ತಾವು ಧಾರವಾಡಕ್ಕೆ ಬಂದಾಗ ಥ್ಯಾಕರೆ ಅವರ ಗೋರಿಯನ್ನು ನೋಡಿದ್ದೀರಿ. ಆಮೇಲೆ ಕೆಲವು ಸಿಮೆಟ್ರಿಗಳನ್ನು ತೋರಿಸಿದ್ದೇವೆ. ಅಲ್ಲಿ ಬ್ರಿಟೀಷ್ ಅಧಿಕಾರಿಗಳ ಗೋರಿಗಳಿವೆ. ಅಲ್ಲಿಗೆ ತಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು. ಬಹುಶಃ ಅವುಗಳನ್ನು ಉಳಿಸಿಕೊಳ್ಳಬೇಕಾಗಿದೆ. ಐತಿಹಾಸಿಕವಾಗಿ ಅವುಗಳನ್ನು ಉಳಿಸಿಕೊಳ್ಳಬೇಕು. ಅಲ್ಲಿ ಒಂದು ಕಸಾಯಿಖಾನೆ ಇದೆ. ಅದರ ಪಕ್ಕದಲ್ಲಿಯೇ ಇದೆ ಅಲ್ಲಿ ಯಾರೂ ಹೋಗುವ ಹಾಗೆ ಇಲ್ಲ. ಅವರೂ ಪಾಪ ಬಹಳ ಕಷ್ಟದಿಂದ ಅಲ್ಲಿಗೆ ಬಂದು ಒಳಗೆಲ್ಲಾ ಬಂದು ಓಡಾಡಿ ನೋಡಿಕೊಂಡು ಬಂದಿದ್ದಾರೆ. ಅಲ್ಲೊಂದು ಮಟನ್ ಮಾರ್ಕೆಟ್ ಇದೆ. ಅವರೆಡನ್ನೂ ಶಿಫ್ಟ್ ಮಾಡಬೇಕೆಂದು ಎಷ್ಟೋ ದಿವಸದಿಂದ ನಾವು ಕೇಳುತ್ತಿದ್ದೇವೆ.

ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. ಆಮೇಲೆ ಥ್ಯಾಕರೆ ಸಮಾಧಿ ಏನು ಇದೆ, ಆ ಗಾರ್ಡನ್‌ನಲ್ಲಿ ವಾದ್ಯಸಂಗೀತವನ್ನು ಪ್ರತಿ ರವಿವಾರ ಶುರುಮಾಡುತ್ತೇನೆಂದು ಹೇಳಿದ್ದಿರಿ. ಬಹುಶಃ ಅದೂ ಶುರುವಾಗಿಲ್ಲ. ಬಹುಶಃ ಈ ಮೂರು ವಿಷಯಗಳ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತೀರಿ. ಈ ರಾಷ್ಟ್ರದ ಒಬ್ಬ ಸ್ವಾತಂತ್ರ್ಯದ ಮೊಟ್ಟಮೊದಲ ಮಹಿಳೆ. ಅದರ ಬಗ್ಗೆ ತಾವು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ಹೇಳಿ ನಾನು ನಿರೀಕ್ಷೆ ಮಾಡುತ್ತೇನೆ. ಸರಿಯಾದ ಉತ್ತರವನ್ನು ನಿಮ್ಮಿಂದ ಅಪೇಕ್ಷೆಪಡುತ್ತೇನೆ.

12.30 ಪಿ.ಎಂ.

ಅಧ್ಯಕ್ಷರು : ಎಲ್ಲರಿಗೂ ಸಮಗ್ರವಾದ ಉತ್ತರವನ್ನು ಕೊಟ್ಟು ಬಿಡಿ.

ಶ್ರೀ ಪಿ.ಎಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವೆಯವರು ಈಗ 30 ಲಕ್ಷ ರೂಪಾಯಿ ಅನುದಾನದ ಬಗ್ಗೆ ಮಾತ್ರ ಮಾತನಾಡುತ್ತಿದ್ದಾರೆ. ನಾವು ಅಪೇಕ್ಷೆ ಮಾಡುತ್ತಿರುವುದು ಏನೆಂದರೆ ಅದೊಂದು ಸ್ಮಾರಕ. ಸರಿಯಾದ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ವಿಶೇಷವಾದಂತಹ ಸ್ಮಾರಕವಾಗಿ ಉಳಿಯಬೇಕು. ರಾಷ್ಟ್ರೀಯ ಮಟ್ಟದಲ್ಲಿ ಒಂದು ವಿಶೇಷವಾದಂತಹ ಐತಿಹಾಸಿಕ ಕೇಂದ್ರವಾಗಿ, ಪ್ರವಾಸಿಗರನ್ನು ಆಕರ್ಷಿಸುವಂತಹ ಕೇಂದ್ರ ಆಗಬೇಕು ಎನ್ನುವಂತಹ ಆಪೇಕ್ಷೆಯಿಂದ ನಾವು ಮಾತನಾಡುತ್ತಿರುವುದು. ತಾವು ಅದೇನೋ ಗಾದೆ ಹೇಳುವ ಹಾಗೆ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವ ಹಾಗೆ 20 ಲಕ್ಷ ರೂಪಾಯಿ 15 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ ಎನ್ನುವಂತಹ ವ್ಯವಸ್ಥೆ ತಾವು ಮಾಡುವುದಾದರೆ ಇದು ಸರಿಯಾಗುವುದಿಲ್ಲ. ಅದರ ಜೊತೆಗೆ ನಾನು ಹೇಳುತ್ತಿರುವುದು ದೆಹಲಿಯ ಕೆಂಪು ಕೋಟೆಯಲ್ಲಿ ಮಾಡಿರುವಂತಥದ್ದು. ಆಮೇಲೆ ಅಂಡಮಾನ್ ನಿಕೋಬಾರ್ ದ್ವೀಪದ ಸೆಲ್ಯೂಲಾರ್ ಜೈಲಿನಲ್ಲಿ ವೀರ್ ಸಾವರ್‌ಕರ್ ಅವರನ್ನು ಹಿಡಿದಿಟ್ಟಂತಹ ಸ್ಥಳ. ಅವೆಲ್ಲಾ ಒಂದು ಲೈಫ್ ಟೈಮ್ ವಿಸಿಟ್. ಆ ರೀತಿಯ ಕಾರ್ಯಕ್ರಮ ಮಾಡಿಕೊಂಡರೆ ಅನೇಕ ಪ್ರವಾಸಿಗರನ್ನು ಆಕರ್ಷಣೆ ಮಾಡಬಹುದು. ಅಧದರ ಜೊತೆಗೆ ಆದಾಯ ಕೂಡ ಅಲ್ಲಿಗೆ ಬರಬಹುದು ಎನ್ನುವಂತಥದ್ದು. ಜಿಲ್ಲೆಯ ಮಂತ್ರಿಗಳು ಇಲ್ಲಿ ಇದ್ದಾರೆ. ಸನ್ಮಾನ್ಯ ಡಿ.ಬಿ. ಇನಾಂದಾರ್ ಅವರು ಇದ್ದಾರೆ. ಅವರು ಏಕೆ ಇದರ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸುತ್ತಿಲ್ಲವೋ ಗೊತ್ತಾಗುತ್ತಿಲ್ಲ. ಇವತ್ತು ಈ ಸ್ಮಾರಕಗಳ ರಕ್ಷಣೆಗಾಗಿ ವಿಶೇಷವಾಗಿ ಎಲ್ಲಾ ಕಟ್ಟಡಗಳೂ ಶಿಥಿಲವಾಗಿ ಹೂಳು ಬೀಳುವಂತಹ ಸ್ಥಿತಿಯಲ್ಲಿದೆ. ಯಾರೇ ಇದನ್ನು ನೋಡಿದರೂ ಕಣ್ಣಿನಲ್ಲಿ ನೀರು ಬರುವಂತಹ ಸ್ಥಿತಿ, ಇದನ್ನು ನಾವು ನೋಡುತ್ತಿದ್ದೇವೆ. ದಯವಿಟ್ಟು ವಿಶೇಷವಾದಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಒಂದು ಗಾದೆಯ ಮಾತಿದೆ. "ಊರು ಕೊಳ್ಳಿ ಹೊಡದ ಮೇಲೆ ಕೋಟಿ ಬಾಗಿಲು ಹಾಕಿದರು" ಎಂಬ ರೀತಿ ಆಗಬಾರದು. ಅವೆಲ್ಲಾ ಸ್ಮಾರಕಗಳು ಬಿದ್ದು ಹೋದ ಮೇಲೆ ಮಾಡುವುದು ಏನಿದೆ? ದಯವಿಟ್ಟು ಶೀಘ್ರವಾಗಿ ಒಂದು ವಿಶೇಷವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಅದರ ಅಭಿವೃದ್ಧಿ ಸರಿಯಾಗಿ ಆಗಬೇಕು. ಆ ಸ್ಮಾರಕಗಳ ಸಂಪೂರ್ಣ ರಕ್ಷಣೆ ಆಗುವಂತಹ ಒಂದು ನಿಶ್ಚಿತ ಕಾರ್ಯಕ್ರಮವನ್ನು ಹಾಕಿಕೊಳ್ಳಿ ಎಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಅಧ್ಯಕ್ಷರು : ಚೀಟಿ ಬರೆದು ಕಳುಹಿಸಿದವರಿಗೆ ಪ್ರಾಶಸ್ತ್ಯ ಕೊಡುತ್ತೇನೆ. ಮಾನ್ಯ ಗುರುಸ್ವಾಮಿಯವರು ಕಡೆಯದಾಗಿ ಕೇಳುತ್ತಾರೆ.

ಶ್ರೀ ಮಹಾಂತೇಶ್ ಎಸ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಇದ್ದಾಗ ಇದಕ್ಕೆ ಒಂದು ವಿಶೇಷವಾದಂತಹ ಯೋಜನೆಗೆ ಸುಮಾರು 6 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಯೋಜನೆಯನ್ನು ಮಾಡಿದ್ದರು. ಸರ್ಕಾರದವರು ಅದಕ್ಕಾದರೂ ಸಹಿತ ಸಂಪೂರ್ಣವಾದಂತಹ ಹಣವನ್ನು ಬಿಡುಗಡೆ ಮಾಡುತ್ತಾರೇನೋ ಎಂದು ಕೇಳುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಹಿಸ್ಟಾರಿಕಲ್ ಪ್ಲೇಸಸ್ ಅನ್ನು ಪ್ರೊಟೆಕ್ಟ್ ಮಾಡಲಿಕ್ಕೋಸ್ಕರ ಕೇಂದ್ರ ಸರ್ಕಾರದವರು ಒಂದು ಆರ್ಕಿಯಾಲಾಜಿಕಲ್ ಅಂಡ್ ಅರ್ಜೀವ್ಸ್ ಆಕ್ಟ್ ಎಂದು ಹೇಳಿ ಪಾಸ್ ಮಾಡಿದ್ದಾರೆ. ನಮ್ಮ ದೇಶದಲ್ಲಿರತಕ್ಕಂಥ ಎಲ್ಲಾ ಹಿಸ್ಟಾರಿಕಲ್ ಪ್ಲೇಸಸ್ ಅನ್ನು ರಕ್ಷಣೆ ಮಾಡುವುದಕ್ಕೋಸ್ಕರವೇ ಆ ಆಕ್ಟನ್ನು ತೆಗೆದುಕೊಂಡು ಬಂದಿದ್ದಾರೆ. ಆ ಆಕ್ಟ್‌ನ ಅಡಿಯಲ್ಲಿ ತಮ್ಮ ಮುಖಾಂತರ ಕೇಳುತ್ತೇನೆ. ಈ ಕಿತ್ತೂರು ರಾಣಿ ಚೆನ್ನಮ್ಮನ ಸ್ಮಾರಕದ ಜಾಗ, ಪ್ಯಾಲೇಸ್ ಏನು ಇದೆ? ಆ ಶೆಡ್ಯೂಲ್ ಲಿಸ್ಟ್‌ನಲ್ಲಿ ಇದು ಸೇರಿದೆಯೇ ಇಲ್ಲವೇ? ಸೇರಿದ್ದ ಪಕ್ಷದಲ್ಲಿ ಕೇಂದ್ರ ಸರ್ಕಾರದಿಂದ ಹರಿದು ಬಂದಂತಹ ಹಣ ಎಷ್ಟು? ಈ ಒಂದು ಕ್ಷೇತ್ರಕ್ಕಾಗಿ ಕೇಂದ್ರ ಕೊಟ್ಟಿರತಕ್ಕ ಹಣ ಎಷ್ಟು? ಈ ಆಕ್ಟ್ ಪ್ರಕಾರ ಈ ಸ್ಮಾರಕವನ್ನು ರಕ್ಷಣೆ ಮಾಡಲೇಬೇಕು ಎಂದು ಇದೆ. ಆ ಶೆಡ್ಯೂಲ್ ಲಿಸ್ಟ್‌ನಲ್ಲಿ ಬರಬೇಕಾಗಿರತಕ್ಕದ್ದು ಕಡ್ಡಾಯ. Is it correct or not let me know from the Government.

ಶ್ರೀಮತಿ ರಾಣಿ ಸತೀಶ್ : ಸನ್ಮಾನ್ಯ ಅಧ್ಯಕ್ಷರೇ, ಕಿತ್ತೂರು ರಾಣಿ ಚೆನ್ನಮ್ಮನ ಬಗ್ಗೆ ಬಹಳಷ್ಟು ಎಲ್ಲಾ ಶಾಸಕ ಸಹೋದರರು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನೊಬ್ಬ ಮಹಿಳೆಯಾಗಿ ನನ್ಗೆ ಇನ್ನೂ ಹೆಚ್ಚಿನ ಗೌರವ ಇದೆ. ಮತ್ತೆ ನಮ್ಮ ಮಾನ್ಯ ಶಾಸಕರಾದ ಬೆಲ್ಲದ್ ಅವರು ಹೇಳಿದ ಹಾಗೆ ನಾನು ಧ್ಯಾಕರೆ ಸಮಾದಿಗೆ ಹೋಗಿದ್ದು ನಿಜ. ಅಲ್ಲಿ ಕಸಾಯಿ ಖಾನೆ, ಅದರ ಸ್ಥಳ ಪರಿಶೀಲನೆ ಮಾಡಿದಂತಹ ಹಿನ್ನೆಲೆಯೊಳಗೆ ಈಗಾಗಲೇ ನಾವು ಇಂಟಾಕ್ ಪತಿಯಿಂದ ಭಾರತೀಯ ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯ ರಾಷ್ಟ್ರೀಯ ಟ್ರಸ್ಟ್‌ನಲ್ಲಿ ನಾವು 18 ಪ್ರದೇಶಗಳನ್ನು ಏನು ಗುರುತಿಸಿದ್ದೇವೆ; ಅದರಲ್ಲಿ ಈ ಪ್ರದೇಶವೂ ಸೇರಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ. ಅದು ಆಗುತ್ತದೆ. ಮತ್ತು ಅಲ್ಲಿ ಕಸಾಯಿ ಖಾನೆ ಬದಲಿ ಮಾಡುವುದಕ್ಕೆ ಕಾರ್ಪೊರೇಷನ್ ನವರಿಗೆ ನಾನು ಸಂಪರ್ಕ ಮಾಡಿದ್ದೇನೆ. ಅವತ್ತೂ ಸಹ ನಾನು ನಿಮ್ಮ ಮುಂದೆಯೇ ಅಧಿಕಾರಿಗಳಿಗೆ ಹೇಳಿದ್ದೆ. ಮತ್ತೊಮ್ಮೆ ಅಧಿಕಾರಿಗಳ ಜೊತೆ ಮಾತನಾಡಿ ಆ ಕಸಾಯಿ ಖಾನೆ ಸ್ಥಳಾಂತರ ಮಾಡುವ ಹಂತದಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಮಹಿಳಾ ದಿನಾಚರಣೆ ಆಚರಿಸಬೇಕು ಎಂಬ ವಿಚಾರ. ಆದರೆ ಮಹಿಳಾ ದಿನಾಚರಣೆ ಆಚರಿಸತಕ್ಕಂಥಾದ್ದು ನಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದನ್ನು ಜಿಲ್ಲಾ ಉತ್ಸವದಲ್ಲಿ ಮಾರ್ಪಾಡು ಮಾಡಿದರೆ ಆ ಉತ್ಸವಕ್ಕೆ ಏನು ಸಹಕಾರ ಬೇಕೋ ಅದನ್ನು ನಮ್ಮ ಇಲಾಖೆಯಿಂದ ಕೊಡುತ್ತಿದ್ದೇವೆ. ಜಿಲ್ಲಾ ಉತ್ಸವದೊಳಗೆ ಕಿತ್ತೂರು ರಾಣಿ ಚೆನ್ನಮ್ಮನ ಉತ್ಸವವನ್ನು ಆಚರಣೆ ಮಾಡತಕ್ಕ ನಿಟ್ಟಿನಲ್ಲಿ ಆ ಯೋಜನೆಗೆ ಹಣ ಕೊಡಬಹುದು. ಆದರೆ ಮಹಿಳಾ ದಿನಾಚರಣೆ ನಮ್ಮ ಇಲಾಖೆಯ ಅಡಿಯಲ್ಲಿ ಬರುವುದಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಅದನ್ನು ಆಚರಣೆ ಮಾಡುವ ಕ್ರಮ ಮಾಡುತ್ತಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಏಳು ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದರು. ಆದರೆ ಅದು ಬಿಡುಗಡೆ ಆಗಿಲ್ಲ.

ಇದಕ್ಕಾಗಿ ಹಣ ಇಟ್ಟಿರಲಿಲ್ಲ, ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇಷ್ಟಾದರೂ ಸಹ ನಮ್ಮ ಇಲಾಖೆಯಲ್ಲಿ ಇರತಕ್ಕ ಹಣದಲ್ಲಿ ಯೋಜನೆಗಳನ್ನು ವಿಸ್ತಾರವಾಗಿ ತೆಗೆದುಕೊಂಡಿದ್ದೇವೆ ಮತ್ತು ನಮ್ಮ ಪ್ರವಾಸೋದ್ಯಮ ಇಲಾಖೆಯ ಸಚಿವರ ಸಹಯೋಜನೆ ಮೇರೆಗೆ ಇದನ್ನು ವಿಸ್ತಾರ ಮಾಡಿ ಹೆಚ್ಚಿನ ಗತಿಯಿಂದ ಪರಿಣಾಮಕಾರಿಯಾಗಿ ಮಾಡತಕ್ಕಂಥಾದ್ದಕ್ಕೆ ನನ್ನ ಇಲಾಖೆ ಸಂಪೂರ್ಣ ಸಹಕಾರ ಕೊಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ದೆಹಲಿಯಲೆಲ್ಲಾ ಸಹ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಉನ್ನತ ಸಮಿತಿಯನ್ನು ಕೇಂದ್ರ ಸರ್ಕಾರ ಈಗಾಗಲೇ ರಚಿಸಿದೆ. ಅದಕ್ಕೆ ಬೇಕಾದಂತಹ ಕೆಲಸಗಳನ್ನು ನಮ್ಮ ಇಲಾಖೆ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಇವತ್ತು ಉಳಿದಿರುವ ಪ್ರಶ್ನೆಗಳನ್ನು ಮುಂದಿನ ದಿವಸಕ್ಕೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿ. ಚನ್ನಿಗಪ್ಪ : ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಇದೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಸ್ನೇಹಿತರನ್ನು ಕೇಳಿ.ನಿಮ್ಮ ಸ್ನೇಹಿತರು ಒಂದೊಂದು ಪ್ರಶ್ನೆ ಮೇಲೆ 25 ಸಪ್ಲಿಮೆಂಟರೀಸ್ ಕೇಳುತ್ತಾರೆ. ಇವತ್ತು ಉಳಿದಿರುವ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ. ಅದನ್ನು ಮುಂದಿನ ಒಂದೆರಡು ದಿನಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. ಕ್ಷಮಿಸಿ, ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಇಪ್ಪತ್ತು ನಿಮಿಷಗಳು ಜಾಸ್ತಿ ಆಗಿದೆ.

(ಗೊಂದಲ)

ಅಧ್ಯಕ್ಷರು : ಒಂದು ಕೆಲಸ ಮಾಡೋಣ. ಬಿ.ಎ.ಸಿ.ಮೀಟಿಂಗ್ ನಲ್ಲಿ ಈ ಸಬ್ಜಕ್ಟ್ ಇಡೋಣ. ಪ್ರಶ್ನೋತ್ತರ ಕಾಲವನ್ನು ಎರಡು ಗಂಟೆ ಕಾಲ ಮಾಡೋಣವೆಂದರೆ ಪ್ರಶ್ನೋತ್ತರವನ್ನು ಎರಡು ಗಂಟೆ ಮಾಡಲು ಒಪ್ಪಿದರೆ I have no objections. If the question have is extend for two hours, I have no objection. ಈಗಾಗಲೇ ಇವತ್ತು ಪ್ರಶ್ನೋತ್ತರಕ್ಕೆ 20 ನಿಮಿಷ ಹೆಚ್ಚಿಸಲಾಗಿದೆ. ನ್ಯಾಯವಾಗಿ ಪ್ರಶ್ನೆ ಲ್ಯಾಪ್ಸ್ ಆಗಬೇಕು. ಲ್ಯಾಪ್ಸ್ ಆಗುವುದಿಲ್ಲ ಮುಂದೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ. ಸಿಗಟಿ ಬಗ್ಗೆ ನಿಯಮ 69ರ ಅಡಿಯಲ್ಲಿ ಅಲೋ ಮಾಡುತ್ತೇನೆ. ಮಾತನಾಡಿ, I have already allowed.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 5-3-2003ರ ಲಿಖಿತ ಮೂಲಕ ಉತ್ತರಿಸುವ 153 ಪ್ರಶ್ನೆಗಳ ಪೈಕಿ 136 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ - 1)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು), ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ ಅವರ ಪರವಾಗಿ)